# ಅಧ್ಯಾಯ ೧

# ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

---

೧.೧. ಅಧ್ಯಯನದ ವ್ಯಾಪ್ತಿ

೧.೨. ಅಧ್ಯಯನದ ಸ್ವರೂಪ

---

# ಅಧ್ಯಾಯ ೧

# ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

ಮತಾಂತರವು ಎಲ್ಲ ಕಾಲಕ್ಕೂ ಅಭಿವ್ಯಕ್ತಗೊಳ್ಳುವ ಮತ್ತು ಚರ್ಚೆಗೊಳಗಾಗುತ್ತಿರುವ ಪರಿಕಲ್ಪನೆಯಾಗಿದೆ. ಮತಾಂತರಕ್ಕೆ ಧಾರ್ಮಿಕ ಮತೀಯ ಸಾಮಾಜಿಕ ಆರ್ಥಿಕ ರಾಜಕೀಯ ಮತ್ತು ಕೌಟುಂಬಿಕ ಆಯಾಮಗಳಿವೆ. ಕನ್ನಡದ ಪ್ರಾಚೀನ ಕಾವ್ಯಗಳಲ್ಲೇ ಮತಾಂತರದ ಸ್ವರೂಪಗಳನ್ನು ಗುರುತಿಸಬಹುದು. ಕವಿರಾಜಮಾರ್ಗದಲ್ಲಿ ಜೈನಧರ್ಮ ಪ್ರಚಾರದ ಆಶಯಗಳಿವೆ. ವಡ್ಡಾರಾಧನೆ ಮತಾಂತರದ ನೆಲೆಗಳನ್ನೊಳಗೊಂಡಿದೆ. ಬಸವಣ್ಣನ ಲಿಂಗದೀಕ್ಷೆಯ ಪರಿಕಲ್ಪನೆಯಲ್ಲಿ ಮತಾಂತರದ ಹೊಳಹುಗಳಿವೆ. ಕನ್ನಡ ಸಾಹಿತ್ಯದಲ್ಲಿ ಮತಾಂತರದ ವಿಚಾರವು ವಿಸ್ತಾರ ಮತ್ತು ಗಂಭೀರವಾಗಿದ್ದು ಕನ್ನಡದ ಕಾದಂಬರಿಕಾರರನ್ನೂ ಬಲವಾಗಿ ಆವರಿಸಿಕೊಂಡಿದೆ. ಸೀಮಿತ ಅವಧಿಯ ಕಾದಂಬರಿಕಾರರನ್ನು ಗಮನದಲ್ಲಿಟ್ಟುಕೊಂಡು ಮತಾಂತರ ಪರಿಕಲ್ಪನೆಯ ಆಗುಹೋಗುಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ನವೋದಯ ಕಾಲಘಟ್ಟವು ಮತಾಂತರಕ್ಕೆ ಭದ್ರ ನೆಲೆಗಟ್ಟಾಗಿ ಪರಿಣಮಿಸಿತ್ತು. ವಸಾಹತು ಮತ್ತು ಮಿಶನರಿಗಳ ಪ್ರೋತ್ಸಾಹ ಪಡೆದ ಮತಾಂತರ ಕ್ರಿಯೆ ಸಹಜವಾಗಿಯೇ ವ್ಯಾಪಕತೆಯನ್ನು ಪಡೆಯಿತು. ನವೋದಯ ಕಾಲಘಟ್ಟವು ರಾಷ್ಟ್ರೀಯವಾದವನ್ನು ಪುನರ್ರೂಪಿಸಿದ್ದರಿಂದ ಭಾರತೀಯ ಧಾರ್ಮಿಕ ನಂಬಿಕೆಗಳಿಗೆ ಹೆಚ್ಚಿನ ಬಲ ದೊರೆಯಿತು. ಈ ಹೊತ್ತಿನ ಕಾದಂಬರಿಕಾರರು ಕಾದಂಬರಿಗಳಲ್ಲಿ ಮತಾಂತರವನ್ನು ಪ್ರಧಾನಭಿತ್ತಿಯಾಗಿ ಬಳಸಿಕೊಂಡರು. ಮತಾಂತರ ಪರ ಮತ್ತು ವಿರೋಧ ಎರಡೂ ಅಭಿಪ್ರಾಯಗಳನ್ನು ನವೋದಯ ಕಾದಂಬರಿಗಳು ಧ್ವನಿಸಿವೆ. ಈ ಅಂಶವನ್ನು ಆಧರಿಸಿ ಪ್ರಸ್ತುತ ಅಧ್ಯಯನಕ್ಕೆ ನವೋದಯ ಕಾಲವನ್ನು ನಿಗದಿಪಡಿಸಿಕೊಂಡಿದೆ.

ಕರ್ನಾಟಕದಲ್ಲಿ ಮತಾಂತರವು ಸಮಕಾಲೀನ ಚರ್ಚೆಯ ವಿಷಯವಾಗಿದೆ. ಮತಾಂತರದ ನೆಪದಲ್ಲಿ ನಡೆಯುತ್ತಿರುವ ಓಲೈಕೆಗಳು, ವಿರೋಧಗಳು ಸಮಾಜವಿರೋಧಿ ಚಟುವಟಿಕೆಗಳಿಗೆ ಸಾಕ್ಷಿಯಾಗುತ್ತಿವೆ. ಮನಸ್ಸುಗಳನ್ನು ಬೆಸೆಯಬೇಕಾದ ಮತಗಳು ಜಾತಿ ಮತ್ತು ಮತಗಳ ಕ್ರೌರ್ಯದಲ್ಲಿ

ವಿಕಾರಗೊಳ್ಳುತ್ತಿವೆ. ಹೊರಗಿನಿಂದ ಬಂದ ಮತಗಳು ಭಾರತೀಯರ ಜೀವನ ಕ್ರಮವನ್ನು ಬದಲಿಸಿವೆ. ಮತಾಂತರವೆಂಬ ಹೊಸಭ್ರಮೆ ಒಂದೆಡೆಯಾದರೆ ಮರುಮತಾಂತರವೆಂಬ ಸನಾತನ ನಂಬಿಕೆಯನ್ನೇ ಪ್ರತಿಪಾದಿಸುವ ಸಂಸ್ಥೆಗಳು ಆಯಾಯ ಮತಗಳಲ್ಲಿ ಅಂತರ್ಗತವಾಗಿರುವ ಮಾನವೀಯ ಸೆಲೆಗಳನ್ನು ಬತ್ತಿಸಿವೆ. ಮತಾಂತರದ ಕಾರಣಕ್ಕಾಗಿ ಬದಲಾದ ಜೀವನಕ್ರಮದ ಪಲ್ಲಟ ಮತ್ತು ತಳಮಳಗಳನ್ನು ಈ ಸಂಶೋಧನಾ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

**ನವೋದಯ ಕಾದಂಬರಿಗಳಲ್ಲಿ ಮತಾಂತರ ಮತ್ತು ಸಾಂಸ್ಕೃತಿಕ ಸಂಘರ್ಷ** ಎಂಬ ಈ ಅಧ್ಯಯನವು ಮತಾಂತರವನ್ನು ಕುರಿತ ಹಲವು ವಿಚಾರಗಳ ಚರ್ಚೆಯನ್ನೊಳಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಮತಾಂತರ ಪ್ರಸ್ತಾಪ ಪ್ರಾರಂಭವಾದ ಕಾಲದಿಂದ ಈವರೆಗೆ ಬದಲಾದ ಮತಾಂತರದ ಸ್ವರೂಪಗಳ ವಿವರ, ಕಾರಣ, ಸಂದರ್ಭ ಮತ್ತು ಸಂಘರ್ಷಗಳನ್ನು ವಿಶ್ಲೇಷಿಸುವುದು ಈ ಅಧ್ಯಯನದ ಆಶಯ. ವ್ಯಕ್ತಿ ಮತ್ತು ಸಮುದಾಯದ ಸಮಸ್ಯೆಗಳಿಗೆ ಮತಾಂತರವು ಶಾಶ್ವತ ಪರಿಹಾರವೇ, ಮತಾಂತರದ ಸಂಘರ್ಷಗಳು ಜೀವವಿರೋಧಿ ಕ್ರೌರ್ಯಕ್ಕೆ ಕಾರಣವಾಗುತ್ತಿರುವುದು ಏಕೆ, ಮತಾಂತರದಿಂದ ಸಾಮರಸ್ಯದ ಬದುಕು ಸಾಧ್ಯವಿಲ್ಲವೇ ಇಂತಹ ಗಂಭೀರ ವಿಚಾರಗಳನ್ನು ಕನ್ನಡ ಕಾದಂಬರಿಗಳ ಹಿನ್ನೆಲೆಯಲ್ಲಿ ಜಿಜ್ಞಾಸೆಗೊಳಪಡಿಸಿ ಆ ಮೂಲಕ ಹೊಸ ಫಲಿತಗಳನ್ನು ಕಂಡುಕೊಳ್ಳುವುದು ಈ ಸಂಶೋಧನಾ ಮಹಾಪ್ರಬಂಧದ ಉದ್ದೇಶವಾಗಿದೆ.

ಮತಾಂತರಕ್ಕೆ ಇರಬಹುದಾದ ಪ್ರೇರಣೆ ಒತ್ತಡ ಮತ್ತು ಕಾರಣಗಳೇನು ಮತಾಂತರವೆಂದರೆ ಅದು ಕೇವಲ ಜಾತಿಯಿಂದ ಜಾತಿಗೆ ಬದಲಾಗುವಿಕೆಯೇ, ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಜಿಗಿಯುವ ಅವಕಾಶವೇ, ಮತವನ್ನು ಗ್ರಹಿಸಬೇಕಾದ ನೆಲೆಗಳು ಯಾವುವು, ಮತಾಂತರದ ಹಿನ್ನೆಲೆ ಮುನ್ನೆಲೆಗಳಲ್ಲಿ ಕೇವಲ ಧರ್ಮಪ್ರಚಾರವಷ್ಟೇ ಮುಖ್ಯವೇ ಇಂತಹ ಹಲವು ಗುಮಾನಿಗಳಿಗೆ ಉತ್ತರ ಕಂಡುಕೊಳ್ಳುವುದು ಈ ಸಂಶೋಧನಾ ಮಹಾಪ್ರಬಂಧದ ಉದ್ದೇಶವಾಗಿದೆ.

ಮತಾಂತರಕ್ಕೆ ಪರ್ಯಾಯ ಅವಸ್ಥೆಗಳು ಇವೆಯೇ, ಮರುಮತಾಂತರ, ಕೂಡುಕಟ್ಟಲೆ, ಶುದ್ಧೀಕರಣದಂತಹ ಕ್ರಿಯೆಗಳ ಮಹತ್ವವೇನು, ಇವು ಮತಾಂತರದ ಪ್ರತಿಭಟನಾರೂಪಗಳೇ, ಮೂಲಮತಸ್ಥರನ್ನು, ಮೂಲದಲ್ಲೇ ಬಂಧಿಸುವ ತಂತ್ರಗಳೇ ಎಂಬ ಸಂದೇಹಗಳನ್ನು ಚರ್ಚಿಸುವ ಉದ್ದೇಶವನ್ನು ಈ ಮಹಾಪ್ರಬಂಧ ಒಳಗೊಂಡಿದೆ. ಮತಾಂತರವನ್ನು ಬೋಧಿಸುವ ಮತಪ್ರವರ್ತಕರ ಉದ್ದೇಶಗಳೇನು, ಮತಾಂತರಿಗಳು ಅದನ್ನು ಹೇಗೆ ಸ್ವೀಕರಿಸಿದ್ದಾರೆ, ಅವರಲ್ಲಾದ ಬದಲಾವಣೆಗಳೇನು,

ಅಸ್ಪೃಶ್ಯತೆ, ಅಸಮಾನತೆಯಂತಹ ಸಾಮಾಜಿಕ ಅನಿಷ್ಟಗಳು ಮತಾಂತರದ ಮೂಲಕ ನಿವಾರಣೆ ಆಗಬಹುದೇ, ಭಾರತೀಯ ಮತಗಳು ವಿದೇಶಿ ಮತಾಂತರಕ್ಕೆ ಪ್ರತಿಕ್ರಿಯಿಸಿದ ಬಗೆ ಎಂತಹುದು, ಇಂತಹ ಹಲವು ಜಿಜ್ಞಾಸೆಗಳನ್ನು ನಿರೂಪಿಸುವುದು ಈ ಸಂಶೋಧನಾ ಮಹಾಪ್ರಬಂಧದ ಉದ್ದೇಶವಾಗಿದೆ.

ಕರ್ನಾಟಕದಲ್ಲಿ ಮತಾಂತರದ ಚರ್ಚೆ ಬಿರುಸಿನಿಂದ ಸಾಗಿದೆ. ಅಲ್ಲಲ್ಲಿ ಭುಗಿಲೇಳುತ್ತಿರುವ ಮತಾಂತರದ ದೊಂಬಿಗಳ ಹಿನ್ನೆಲೆಯಲ್ಲಿ ಇರಬಹುದಾದ ಹಿಂದೂಮತ ಪರವಾದ ಒಲವು ಸನಾತನ ಮೌಲ್ಯಗಳನ್ನು ಪೋಷಿಸುವಂತಾದ್ದು. ನವೋದಯ ಸಾಹಿತ್ಯವು ವಸಾಹತುಶಾಹಿ ಛಾಯೆಗೆ ಒಳಗಾದ್ದರಿಂದ ಸಹಜವಾಗಿಯೇ ಕ್ರೈಸ್ತ ಮತಾಂತರದ ಪ್ರಭಾವ ನವೋದಯ ಕಾದಂಬರಿಕಾರರನ್ನು ಆವರಿಸಿತು. ಸ್ವಾತಂತ್ರ್ಯಪೂರ್ವದಲ್ಲಿ ಮತಾಂತರಗಳಿಂದ ಪರಿಣಾಮಗಳು ಸಮುದಾಯಗಳನ್ನು ಆವರಿಸಿದಂತೆ ಆ ಕಾಲದ ಚಿಂತನಾಕ್ರಮ ಮತ್ತು ಬದುಕಿನಗತಿಯನ್ನೂ ಬದಲಾಯಿಸಿದವು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಮೊದಲ ದಶಕದ ಕನ್ನಡ ಕಾದಂಬರಿಗಳಲ್ಲಿ ಗಾಢವಾಗಿ ಕಾಣಿಸಿಕೊಂಡ ಮತಾಂತರಕ್ರಿಯೆ ನಂತರದ ದಶಕದಲ್ಲಿ ಅಷ್ಟು ಸಾಂದ್ರವಾಗಿ ಪ್ರಕಟವಾಗಲಿಲ್ಲ. ಈ ವಿರಳತೆಗೆ ಕಾರಣಗಳನ್ನು ಶೋಧಿಸುವುದು ಪ್ರಸ್ತುತ ಮಹಾಪ್ರಬಂಧದ ಉದ್ದೇಶವಾಗಿದೆ.

ಸ್ವಾತಂತ್ರ್ಯಪೂರ್ವ ಮತ್ತು ಅದರ ಆರಂಭದ ದಶಕಗಳಲ್ಲಿ ಹಿಂದೂಮತ ಸುಧಾರಣಾವಾದ ಪುನರುತ್ಥಾನವಾದ ರಾಷ್ಟ್ರೀಯವಾದಗಳಂತಹ ಪ್ರಖರ ಸಿದ್ಧಾಂತಗಳು ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಅಭಿಪ್ರಾಯಗಳನ್ನು ಮೂಡಿಸುವಲ್ಲಿ ನಿರತವಾಗಿದ್ದವು. ಇದರ ಪರಿಣಾಮವನ್ನು ಮತಾಂತರ ವಿರೋಧಿ ಪ್ರಕ್ರಿಯೆಯಲ್ಲಿ ಗುರುತಿಸಬಹುದು.

**ಇಂದಿರಾಬಾಯಿ** (೧೮೯೯)ಯಿಂದ **ಸ್ವಪ್ನಸಾರಸ್ವತ** (೨೦೦೯)ದವರೆಗೂ ಕ್ರೈಸ್ತ ಮತಾಂತರದ ವಿಚಾರಗಳೇ ಮುನ್ನೆಲೆಯಲ್ಲಿರಲು ಕಾರಣಗಳೇನು ದಲಿತರು ಮತ್ತು ಅಸ್ಪೃಶ್ಯರೇ ಮತಾಂತರದ ಮೊದಲ ಗುರಿಗಳಾಗಲು ಕಾರಣಗಳೇನು, ಮೇಲ್ವರ್ಗದವರ ಮತಾಂತರ ನಡೆದಿದ್ದರೂ ಪ್ರಧಾನ ನೆಲೆಯಲ್ಲಿ ಚರ್ಚೆಯಾಗದಿರಲು ಕಾರಣಗಳೇನು ಮತಾಂತರ ಅಭಿವ್ಯಕ್ತಿಯಲ್ಲಿ ನವೋದಯ ಕಾಲದ ಬ್ರಾಹ್ಮಣ ವಲಯದ ಕಾದಂಬರಿಕಾರರೇ ಹೆಚ್ಚುಹೆಚ್ಚು ತೊಡಗಿಕೊಳ್ಳಲು ಕಾರಣಗಳೇನು ಎಂಬ ಅಂಶಗಳ ಚರ್ಚೆಯ ಉದ್ದೇಶವೂ ಈ ಮಹಾಪ್ರಬಂಧದಲ್ಲಿ ಅಂತರ್ಗತವಾಗಿದೆ.

ಮತಾಂತರವು ಕೇವಲ ದಲಿತ ಮತ್ತು ಶೂದ್ರರನ್ನು ಕೇಂದ್ರಿಕರಿಸಿಲ್ಲ. ಮೇಲ್ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯಗಳನ್ನೂ ಒಳಗೊಂಡಿದೆ. ಅದು ಕೇವಲ ಅವಿದ್ಯಾವಂತ ವರ್ಗ ಮತ್ತು ಬಡವರನ್ನು ಸುತ್ತಿಕೊಂಡಿಲ್ಲ, ವಿದ್ಯಾವಂತ ಹಾಗೂ ಉಳ್ಳವರನ್ನೂ ತನ್ನ ತೆಕ್ಕೆಯಲ್ಲಿ ಸೇರಿಸಿಕೊಂಡಿದೆ. ಮತಾಂತರ ಕುರಿತು ಇದುವರೆಗೆ ಪ್ರಕಟವಾದ ಚರ್ಚೆ, ವಿಮರ್ಶೆ ಮತ್ತು ಸಂಶೋಧನೆಗಳಲ್ಲಿ ಈ ಅಂಶಗಳು ಹೊರಹೊಮ್ಮಿಲ್ಲ. ಪ್ರಸ್ತುತ ಅಧ್ಯಯನವು ತೆರೆಮರೆಗೆ ಸರಿದ ಇಂತಹ ವಿಚಾರಗಳ ಮೇಲೆ ಬೆಳಕು ಚೆಲ್ಲಿದೆ.

ಮತಾಂತರವು ಬಿಡುಗಡೆಯ ಮಾರ್ಗವಾದಂತೆ ಸಂಘರ್ಷಗಳ ಮೂಲವೂ ಆಗಬಹುದು. ಈ ಬಗೆಯ ಸಂಘರ್ಷಗಳ ನೆಲೆಗಳನ್ನು ಗುರುತಿಸಿ ಅವುಗಳನ್ನು ಕ್ರಮಬದ್ಧವಾದ ಅಧ್ಯಯನಕ್ಕೆ ಒಳಪಡಿಸುವುದು ಈ ಮಹಾಪ್ರಬಂಧದ ಉದ್ದೇಶವಾಗಿದೆ. ಸಾಮಾಜಿಕ ಮತ್ತು ಅಸಮಾನತೆಯ ಪರಿಹಾರಯೋಜನೆಯಾಗಿ ರೂಪುಗೊಳ್ಳಬೇಕಾಗಿದ್ದ ಮತಾಂತರವು, ಬೌದ್ಧಿಕ ಮತ್ತು ಭೌತಿಕ ಸಂಘರ್ಷಗಳಿಗೆ ಕಾರಣವಾಗುವ ಬಗೆಯನ್ನು ಇಲ್ಲಿ ಗಮನಿಸಲಾಗಿದೆ. ಮತಾಂತರಸಂಬಂಧಿ ಸಂಘರ್ಷಗಳು ಜೀವವಿರೋಧಿ ಕ್ರೌರ್ಯದಲ್ಲಿ ಕೊನೆಯಾಗುವ ಸಂದರ್ಭಗಳನ್ನು ಈ ಅಧ್ಯಯನವು ಒಳಗೊಂಡಿದೆ. ಮತಾಂತರವು, ಜಾತಿ, ಮತೀಯ ಮತ್ತು ವರ್ಗ ಸಂಘರ್ಷಗಳಾಗಿ ಸಮಾಜದ ನೆಮ್ಮದಿ ಕೆಡಿಸುವ ಹುನ್ನಾರವಾಗುವ ದುರಂತವನ್ನು ವಿವೇಚಿಸುವುದೂ ಈ ಸಂಶೋಧನಾ ಪ್ರಬಂಧದ ಆಶಯವಾಗಿದೆ.

ಮತಾಂತರಗಳು ಕೋಮು-ಸಾಮರಸ್ಯದ ಕೊಂಡಿಗಳಾಗುವ ಸಾಧ್ಯತೆಗಳು ಕನ್ನಡ ಕಾದಂಬರಿಗಳಲ್ಲಿ ವ್ಯಕ್ತವಾಗಿವೆ. ಇಂತಹ ಅಪರೂಪದ ಸಂದರ್ಭಗಳನ್ನು ಇಂದಿನ ಮತೀಯ ಗಲಭೆಗಳ ತುರ್ತುಪರಿಸ್ಥಿತಿಯಲ್ಲಿ ದಾಖಲಿಸಲೇಬೇಕಾದ ಹೊಣೆಗಾರಿಕೆಯು ಈ ಮಹಾಪ್ರಬಂಧದ ಉದ್ದೇಶವಾಗಿದೆ. ಮತಾಂತರ ವಿರೋಧಿಧೋರಣೆಗಳ ಪ್ರಸ್ತಾಪದಲ್ಲಿ ಕೆಲವೊಮ್ಮೆ ಏಕಸೂತ್ರತೆ, ಕೆಲವೊಮ್ಮೆ ವಿಭಿನ್ನತೆಗಳಿವೆ. ಕಾದಂಬರಿಕಾರರು ತಮ್ಮ ವೈಯಕ್ತಿಕ ಮತ್ತು ಸಾಮುದಾಯಿಕ ನೆಲೆಗಳಲ್ಲಿ ಇಂತಹ ವಿರೋಧಗಳನ್ನು ವ್ಯಕ್ತಪಡಿಸಿದ್ದಾರೆ. ಈ ಭಿನ್ನತೆಗಳ ಕಾರಣಗಳನ್ನು ಶೋಧಿಸುವ ಆಶಯವನ್ನು ಈ ಸಂಶೋಧನಾ ಪ್ರಬಂಧವು ಒಳಗೊಂಡಿದೆ.

## ೧.೧. ಅಧ್ಯಯನದ ವ್ಯಾಪ್ತಿ

ಮತಾಂತರವೆಂಬ ಪರಿಕಲ್ಪನೆಯನ್ನು ಜಾತ್ಯಂತರ ಮತ್ತು ಧರ್ಮಾಂತರಗಳ ಸಮಾನಂತರ ನೆಲೆಯಲ್ಲಿ ಗ್ರಹಿಸಲಾಗಿದೆ. ಮತವೆಂಬುದು ಅಭಿಪ್ರಾಯ ಎಂಬರ್ಥದಲ್ಲಿ ಬಳಕೆಯಾಗುತ್ತಿದ್ದು ಜಾತಿ ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಮತಾಂತರವೆಂದರೆ Conversion ಎಂಬ ಅರ್ಥವಿದೆ. ಒಂದು ಮತದಿಂದ ಇನ್ನೊಂದು ಮತಕ್ಕೆ ಪರಿವರ್ತನೆಯಾಗುವ ಕ್ರಿಯೆಯನ್ನು ಮತಾಂತರವೆಂದು ಪರಿಗಣಿಸಲಾಗಿದೆ.

ನವೋದಯ ಪೂರ್ವದ ಕಾದಂಬರಿಗಳು ಮತಾಂತರವನ್ನು ಪ್ರಸ್ತಾಪಿಸಿವೆ. ಕನ್ನಡದ ಆರಂಭಿಕ ಕಾದಂಬರಿಗಳಾದ **ಇಂದಿರಾಬಾಯಿ** (೧೮೯೯) ಮತ್ತು **ಇಂದಿರಾ** (೧೯೦೮) ಕಾದಂಬರಿಗಳಲ್ಲೇ ಮತಾಂತರದ ಸುಳಿವುಗಳಿರುವುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಸಂಶೋಧನಾ ಅಧ್ಯಯನವನ್ನು ಕ್ರಮಬದ್ಧವಾದ ಮತ್ತು ನಿರ್ಧಿಷ್ಟವಾದ ಚೌಕಟ್ಟಿಗೆ ಒಳಪಡಿಸುವ ಕಾರಣದಿಂದ, ನವೋದಯ ಕಾದಂಬರಿಗಳನ್ನು ಆಯ್ಕೆ ಮಾಡಿಕೊಂಡು ಸಾಮಾಜಿಕ ಕಾದಂಬರಿಗಳನ್ನು ಮಾತ್ರ ಗಮನಿಸಿದೆ.

ಈ ಸಂಶೋಧನಾ ಪ್ರಬಂಧದ ಅಧ್ಯಯನ ವ್ಯಾಪ್ತಿಯು ನವೋದಯ ಮಿತಿಗೊಳಪಟ್ಟಿದ್ದರೂ ಸಾಹಿತ್ಯ ಚರಿತ್ರೆಕಾರರು ನಿಗದಿಗೊಳಿಸಿರುವ ೧೯೨೦ ರಿಂದ ೧೯೫೦ ರವರೆಗಿನ ಕಾಲಘಟ್ಟ ಇಲ್ಲಿ ಮುಖ್ಯವಲ್ಲ. ೧೯೩೦ ರಿಂದ ೧೯೮೧ ರವರೆಗಿನ ನವೋದಯ ಧೋರಣೆಯುಳ್ಳ ಹನ್ನೊಂದು ಕಾದಂಬರಿಗಳನ್ನು ಮಹಾಪ್ರಬಂಧದ ಪ್ರಧಾನ ಚರ್ಚೆಗೆ ಒಳಪಡಿಸಲಾಗಿದೆ. ಈ ಚರ್ಚೆಯು ಕಾಲಕ್ಕಿಂತ ಮುಖ್ಯವಾಗಿ ನವೋದಯ ಧೋರಣೆಗಳನ್ನು ಆಧರಿಸಿದೆ. ಶಿವರಾಮಕಾರಂತ, ಕುವೆಂಪು, ಎಂ.ವಿ. ಸೀತಾರಾಮಯ್ಯ, ದೇವುಡು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅವರ ಮತಾಂತರ ಪರಿಕಲ್ಪನೆಯನ್ನು ಸೂಕ್ಷ್ಮ ಮತ್ತು ಗಂಭೀರ ಅಧ್ಯಯನಕ್ಕೆ ಒಳಪಡಿಸಿದೆ. ಇನ್ನುಳಿದ ಸಾಹಿತ್ಯಕ ಚಳುವಳಿಯ ಹತ್ತೊಂಬತ್ತು ಕಾದಂಬರಿಗಳ ಮತಾಂತರದ ಸ್ಥೂಲ ಚರ್ಚೆಯೂ ಈ ಅಧ್ಯಯನದಲ್ಲಿದೆ.

ಕನ್ನಡ ಕಾದಂಬರಿಗಳಲ್ಲಿ ಮತಾಂತರ ಚರ್ಚೆ ಬಹುಮಟ್ಟಿಗೆ ಕಾರಂತ ಮತ್ತು ಕುವೆಂಪು ಸಂದರ್ಭಕ್ಕೆ ಮಾತ್ರ ಸೀಮಿತವಾಗಿತ್ತು. ಅದರಲ್ಲೂ ಕಾರಂತರ ಚೋಮನ ದುಡಿ ಮತ್ತು

ಕುಡಿಯರ ಕೂಸು, ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಮತಾಂತರ ಕುರಿತ ಚರ್ಚೆ, ಸಂಶೋಧನೆ ಮತ್ತು ವಿಮರ್ಶೆಗಳೇ ಪ್ರಧಾನವಾಗಿದ್ದವು. ಈ ಅಧ್ಯಯನದಲ್ಲಿ ಕಾರಂತರ ಇನ್ನೂ ನಾಲ್ಕು ಕಾದಂಬರಿಗಳು ಮತ್ತು ಕುವೆಂಪು ಅವರ ಕಾನೂರು ಹೆಗ್ಗಡಿತಿಯಲ್ಲಿ ಇರುವ ಮತಾಂತರ ವಿಚಾರಗಳನ್ನು ಮೊದಲಬಾರಿಗೆ ಚರ್ಚಿಸಲಾಗಿದೆ. ಕ್ರೈಸ್ತ ಮತಾಂತರವಷ್ಟೇ ಅಲ್ಲ, ಭಾರತೀಯ ಮತಗಳೊಳಗಿನ ಮತಾಂತರವನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ನಿರೂಪಿಸಿರುವ ಬಗೆಯನ್ನು ಈ ಅಧ್ಯಯನವು ಒಳಗೊಂಡಿದೆ.

ಮತಾಂತರ ವಿಚಾರವನ್ನು ಬೇರೆಬೇರೆ ದೃಷ್ಟಿಕೋನಗಳಿಂದ ಅಧ್ಯಯನ ಮಾಡಲು ಅವಕಾಶಗಳಿವೆ. ಧಾರ್ಮಿಕ ಸಾಮಾಜಿಕ ರಾಜಕೀಯ ಆರ್ಥಿಕ, ಸುಧಾರಣಾವಾದ ಪುನರುತ್ಥಾನವಾದ ರಾಷ್ಟ್ರೀಯವಾದ ಗಾಂಧೀವಾದ ಅಂಬೇಡ್ಕರ್‌ವಾದ ಮಾರ್ಕ್ಸ್‌ವಾದ ಲೋಹಿಯಾವಾದ ಹೀಗೆ ಹಲವು ಆಯಾಮಗಳಿವೆ. ಈ ಪ್ರಬಂಧದ ವ್ಯಾಪ್ತಿಗೆ ನಿರ್ಧಿಷ್ಟ ಮಿತಿ ಇರುವುದರಿಂದ ಸಾಹಿತ್ಯಕ ನೆಲೆಯನ್ನೇ ಪ್ರಧಾನವಾಗಿ ಗ್ರಹಿಸಲಾಗಿದೆ.

ನವೋದಯ ಕಾದಂಬರಿಗಳ ಮತಾಂತರ ವಿಶ್ಲೇಷಣೆಯೊಂದಿಗೆ ಅವುಗಳು ರೂಢಿಸಿ ಕೊಂಡಿರುವ ಸಂಘರ್ಷದ ನೆಲೆಗಳನ್ನೂ ಚರ್ಚಿಸಲಾಗಿದೆ. ಸಂಘರ್ಷದ ನೆಲೆಗಳನ್ನು ಬೇರೆಬೇರೆ ಸಿದ್ಧಾಂತಗಳ ಹಿನ್ನೆಲೆಯಲ್ಲಿ ವಿವರಿಸುವ ಮತ್ತು ವಿಶ್ಲೇಷಿಸುವ ಮುಕ್ತ ಅವಕಾಶಗಳಿದ್ದರೂ ಈ ಪ್ರಬಂಧದ ವ್ಯಾಪ್ತಿಯಲ್ಲಿ ಅದು ಸಾಧ್ಯವಾಗಿಲ್ಲ. ನವೋದಯ ಕಾದಂಬರಿಗಳಲ್ಲಿ ಮತಾಂತರ ಮತ್ತು ಸಾಂಸ್ಕೃತಿಕ ಸಂಘರ್ಷ ಎಂಬುದು ಸಂಶೋಧನಾ ಮಹಾಪ್ರಬಂಧದ ಶೀರ್ಷಿಕೆಯಾದರೂ ನವೋದಯದಾಚೆಯ ಕಾದಂಬರಿಗಳ ಮತಾಂತರ ವಿಶ್ಲೇಷಣೆಯೂ ಈ ಅಧ್ಯಯನದಲ್ಲಿ ಸೇರಿದೆ.

ಸಾಹಿತ್ಯಕ ಚಳುವಳಿಗಳ ನೆಲೆಯಿಂದ ಗುರುತಿಸುವುದಾದರೆ ಪ್ರಗತಿಶೀಲ ನವ್ಯ ದಲಿತ ಬಂಡಾಯ ಕಾದಂಬರಿಗಳ ಮತಾಂತರದ ವಿಚಾರಗಳನ್ನೂ ಈ ಅಧ್ಯಯನ ಒಳಗೊಂಡಿದೆ. ಮತಾಂತರ ಗ್ರಹಿಕೆಯಲ್ಲಿ ನವೋದಯ ನಂತರದ ಕಾದಂಬರಿಕಾರರ ಧೋರಣೆಗಳು ಬದಲಾಗಿರುವುದನ್ನು ಗುರುತಿಸಬೇಕಾದ ಅನಿವಾರ್ಯತೆ ಒದಗಿದ್ದರಿಂದ ಬಹುಮುಖಿ ನೆಲೆಯ ಹದಿನೈದು ಕಾದಂಬರಿಗಳನ್ನು ಆಯ್ದುಕೊಂಡು ಅವುಗಳ ಸ್ಥೂಲ ಚರ್ಚೆಯನ್ನು ದಾಖಲಿಸಲಾಗಿದೆ. ಯಾವುದೇ ಸಾಹಿತ್ಯಕ ಪಂಥಗಳಲ್ಲಿ ಗುರುತಿಸಿಕೊಳ್ಳದ ಮತ್ತು ಸಮುದಾಯದೊಳಗಿನ ಮತಾಂತರದ ತುಡಿತಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ ನಾ. ಡಿಸೋಜ ಮತ್ತು ಗೋಪಾಲಕೃಷ್ಣ ಪೈ ಅವರ ಕಾದಂಬರಿಗಳ ಅಧ್ಯಯನವು ಈ ಚರ್ಚೆಯಲ್ಲಿ ಸೇರಿದೆ.

ಕಾದಂಬರಿಗಳನ್ನೇ ಆಧರಿಸಿದ ಮತಾಂತರ ಪ್ರಕ್ರಿಯೆಯ ವಿಸ್ತೃತ ಅಧ್ಯಯನಗಳು ಕನ್ನಡದಲ್ಲಿ ವಿರಳ. ಮತಾಂತರ ಕುರಿತಂತೆ ಸಂಶೋಧನಾ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಿಲ್ಲ. ಈ ಅಧ್ಯಯನದ ಸಂದರ್ಭದಲ್ಲಿ ಮತಾಂತರ ಚರ್ಚೆ ಇರುವ ಕೆಲವು ಸಂಶೋಧನೆಗಳನ್ನು ಗಮನಿಸಲಾಗಿದೆ.

೧. ಕುವೆಂಪು ಅವರ ಸಾಹಿತ್ಯದಲ್ಲಿ ಸನಾತನತೆಯ ವಿದಾಯ ಮತ್ತು ಆಧುನಿಕತೆಯ ಆಗಮನದ ಬಿಂಬಗಳು ಒಂದು ಅಧ್ಯಯನ – ಡಾ. ರಘುನಾಥ ಬಿ.ಆರ್.

೨. ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ – ಡಾ. ಅಂಜನಪ್ಪ ಕೆ.

೩. ಕುವೆಂಪು ಕಥನ (ಕನ್ನಡ ಕಥನ ಪರಂಪರೆ ಮತ್ತು ಕುವೆಂಪು ಕಥಾ ಸಾಹಿತ್ಯ) – ಡಾ. ಉದ್ದಂಡಯ್ಯ.

೪. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮತಾಂತರ ಪ್ರಕ್ರಿಯೆ – ಡಾ. ನಾಗವೇಣಿ ಬಿ.ವಿ.

೫. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್ ಚಿಂತನೆಗಳು–ಡಾ. ರಾಮಚಂದ್ರಪ್ಪ ಎ.ಬಿ.

೬. ಕನ್ನಡ ಕಾದಂಬರಿಗಳಲ್ಲಿ ಕೋಮುವಾದದ ವಿಭಿನ್ನ ಸ್ವರೂಪಗಳು–ಡಾ. ವಿಠಲ ಭಂಡಾರಿ.

೭. ಹೊಸಗನ್ನಡ ಕಾದಂಬರಿಗಳಲ್ಲಿ ಅಂತರ್ಜಾತೀಯ ಮತ್ತು ಮತೀಯ ವಿವಾಹ – ಡಾ. ರಘುನಾಥ್ ಎಚ್.ಎಸ್.

೮. ಮಲೆನಾಡಿನ ಸಾಂಸ್ಕೃತಿಕ ಸ್ಥಿತ್ಯಂತರಗಳು – ಡಾ. ಜಯಶೀಲ ಬಿ.ಎಂ.

ನಾಗವೇಣಿಯವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮತಾಂತರ ಪ್ರಕ್ರಿಯೆ ಕೃತಿಯಲ್ಲಿ ಮತಾಂತರದ ವಿಸ್ತೃತ ರೂಪಗಳನ್ನು ವಿಶ್ಲೇಷಿಸಿದ್ದಾರೆ. ಇನ್ನುಳಿದ ಸಂಶೋಧಕರು ಬೇರೆಬೇರೆ ಸಿದ್ಧಾಂತಗಳಿಗೆ ಪೂರಕವಾಗುವಂತೆ ಮತಾಂತರ ಚರ್ಚೆಯನ್ನು ಪ್ರಾಸಂಗಿಕವಾಗಿ ಬಳಸಿಕೊಂಡಿದ್ದಾರೆ. ನಾಗವೇಣಿಯವರ ಸಂಶೋಧನೆಯು ಪ್ರಾಚೀನ ಕನ್ನಡ ಸಾಹಿತ್ಯದಿಂದ ಆರಂಭಿಸಿ ಆಧುನಿಕ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಒಳಗೊಂಡ ಚರ್ಚೆಯಾಗಿದೆ. ಕನ್ನಡ ಸಾಹಿತ್ಯದ ನಿರ್ಧಿಷ್ಟ ಪ್ರಕಾರವನ್ನು ಕುರಿತ ಮತಾಂತರ ಚರ್ಚೆಗಳು ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಇದುವರೆಗೆ ನಡೆದಿಲ್ಲವೆಂದೇ ಹೇಳಬಹುದು. ಈ ಎಲ್ಲ ಸಂಶೋಧನೆಗಳನ್ನು ಗಮನಿಸಿದಾಗ ನವೋದಯ ಪರಂಪರೆಯ ಕಾದಂಬರಿಗಳನ್ನು ಮತಾಂತರ ದೃಷ್ಟಿಯಿಂದ ಮರು ಓದು ಮತ್ತು ಜಿಜ್ಞಾಸೆಗೆ ಒಳಪಡಿಸುವ ತುರ್ತು ಎದುರಾಯಿತು.

## ೧.೨. ಅಧ್ಯಯನದ ಸ್ವರೂಪ

ವರ್ತಮಾನದ ಮತಾಂತರದ ಗೊಂದಲಗಳೊಂದಿಗೆ ಕನ್ನಡ ಕಾದಂಬರಿಗಳು ನಿರೂಪಿಸಿದ ಮತಾಂತರ ಸಂಕಥನವನ್ನು ಮುಖಾಮುಖಿಯಾಗಿಸುವ ಪ್ರಯತ್ನವೇ ಈ ಸಂಶೋಧನಾ ಮಹಾಪ್ರಬಂಧದ ಅಧ್ಯಯನದ ಸ್ವರೂಪವಾಗಿದೆ. **ನವೋದಯಪೂರ್ವ ಕಾದಂಬರಿಗಳು ಮತ್ತು ಮತಾಂತರ ಪರಿಕಲ್ಪನೆ** ಅಧ್ಯಾಯವು ಮುಂದಿನ ಎಲ್ಲ ಅಧ್ಯಾಯಗಳ ಬುನಾದಿಯಾಗಿ ಕೆಲವು ಮುಖ್ಯ ವಿಚಾರಗಳನ್ನು ಪ್ರಸ್ತಾಪಿಸುತ್ತದೆ. ನವೋಯದ ಪೂರ್ವದಲ್ಲಿ ಮತಾಂತರದ ಸ್ವರೂಪ, ಮತಾಂತರದ ಏಜನ್ಸಿಗಳಾದ ಮಿಶನರಿಗಳ ಕಾರ್ಯಚಟುವಟಿಕೆ, ಇಂದಿರಾಬಾಯಿ ಮತ್ತು ಇಂದಿರಾ ಕಾದಂಬರಿಗಳಲ್ಲಿ ಮತಾಂತರದ ಪ್ರಸ್ತಾಪ, ವಸಾಹತುಶಾಹಿ ಪ್ರಭಾವ, ಸಾಂಸ್ಕೃತಿಕ ಸಂಘರ್ಷ ಮತ್ತು ಅನುಸಂಧಾನಗಳ ಚರ್ಚೆಯೊಂದಿಗೆ ನವೋದಯ ಕಾಲದ ಮತಾಂತರ ಜಿಜ್ಞಾಸೆಗೆ ಭೂಮಿಕೆಯಾಗಿ ಈ ಅಧ್ಯಾಯವನ್ನು ನಿರೂಪಿಸಲಾಗಿದೆ.

ಕನ್ನಡದ ಆರಂಭಿಕ ಕಾದಂಬರಿಗಳು ಮತಾಂತರವನ್ನು ಅರಗಿಸಿಕೊಂಡ ಬಗೆ ಈ ಅಧ್ಯಾಯದಲ್ಲಿದೆ. ಇಂದಿರಾಬಾಯಿ ಮತ್ತು ಇಂದಿರಾ ಕಾದಂಬರಿಗಳ ಇದುವರೆಗಿನ ಮತಾಂತರದ ಚರ್ಚೆಗಳು ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಪ್ರಸ್ತುತ ಅಧ್ಯಯನವು ಇವೆರೆಡೂ ಕಾದಂಬರಿಗಳ ಮತಾಂತರದ ಸ್ವರೂಪವನ್ನು ತರ್ಕಬದ್ಧವಾಗಿ ಮಂಡಿಸಿದೆ.

ಮತಾಂತರ ಕುರಿತ ಚಿಂತನೆಗಳು ಪ್ರಾಚೀನ ಕಾಲದಿಂದ ಈ ಹೊತ್ತಿನವರೆಗೂ ಜಾರಿಯಲ್ಲಿವೆ. ಚಿಂತಕರು, ಸಂಶೋಧಕರು, ಶಿಕ್ಷಣತಜ್ಞರು ಸಮಾಜ ವಿಜ್ಞಾನಿಗಳು, ಸಾಹಿತಿಗಳು ರಾಜಕೀಯ ಪಂಡಿತರು, ಮಠ, ಪೀಠಾಧಿಪತಿಗಳು, ಹಲವು ಕ್ಷೇತ್ರದ ಪ್ರತಿನಿಧಿಗಳು ಮತಾಂತರವನ್ನು ಬಗೆಬಗೆಯಲ್ಲಿ ಅರ್ಥೈಸುತ್ತಲೇ ಇದ್ದಾರೆ. ನವೋದಯ ಕಾದಂಬರಿ ಪರಂಪರೆಯನ್ನು ಆಧಾರವಾಗಿಟ್ಟುಕೊಂಡು ಈ ಬಗೆಯ ಚಿಂತನೆಗಳು ಪುನರ್‌ಪರಿಶೀಲನೆಗೆ ಒಳಪಡಿಸುವುದು ಈ ಮಹಾಪ್ರಬಂಧದ ಉದ್ದೇಶವಾಗಿದ್ದು ಬೇರೆಬೇರೆ ಕ್ಷೇತ್ರಗಳಲ್ಲಿ ಪ್ರಸಿದ್ಧವಾದ ಆರು ಚಿಂತಕರ ಅಭಿಪ್ರಾಯಗಳನ್ನು ಆಧರಿಸಿ ಅಧ್ಯಯನವನ್ನು ಮುಂದುವರಿಸಲಾಗಿದೆ.

ಮಿಶನರಿಗಳ ಧರ್ಮಪ್ರಚಾರ ಕಾರ್ಯವನ್ನು ಕನ್ನಡದ ಕಾದಂಬರಿಕಾರರು ಸೂಕ್ಷ್ಮವಾಗಿ ಗ್ರಹಿಸಿ ಅದರಿಂದಾಗಬಹುದಾದ ತಲ್ಲಣ ಮತ್ತು ಸಂಘರ್ಷಗಳನ್ನು ತಮ್ಮ ಕಾದಂಬರಿಗಳಲ್ಲಿ

ಅಭಿವ್ಯಕ್ತಿಸಿದ್ದರು. ವಸಾಹತುಶಾಹಿಯ ಕೊಡುಗೆಯಾದ ಇಂಗ್ಲಿಷ್ ವಿದ್ಯಾಭ್ಯಾಸ ಮತ್ತು ಹೊಸ ಆಲೋಚನಾ ಕ್ರಮ, ಕನ್ನಡಿಗರನ್ನು ಕ್ರೈಸ್ತ ಮತದ ಕಡೆಗೆ ಸೆಳೆಯಿತು. ಈ ಎರಡೂ ಕಾದಂಬರಿಗಳು ಎರಡು ಭಿನ್ನ ಪ್ರಾದೇಶಿಕ ಹಿನ್ನೆಲೆಯ ಮತಾಂತರ ಚಟುವಟಿಕೆಗಳನ್ನು ಸೂಚಿಸುತ್ತವೆ. ಕರಾವಳಿ ಮತ್ತು ಉತ್ತರ ಕರ್ನಾಟಕದ ಹರಹಿನ ಮತಾಂತರ ಕಾರ್ಯದ ಸುಳಿವನ್ನು ಈ ಕಾದಂಬರಿಗಳು ಒಳಗೊಂಡಿವೆ. ಈ ಕಾದಂಬರಿಗಳಲ್ಲಿ ಬ್ರಾಹ್ಮಣ ಸ್ತ್ರೀಯರೇ ಮತಾಂತರ ಚರ್ಚೆಯ ಮೂಲಭಿತ್ತಿಯಾಗಿರುವುದನ್ನು ಈ ಅಧ್ಯಯನದಲ್ಲಿ ದಾಖಲಿಸಲಾಗಿದೆ.

**ನವೋದಯ ಕಾದಂಬರಿಗಳಲ್ಲಿ ಮತಾಂತರದ ನೆಲೆಗಳು** ಅಧ್ಯಾಯವು ಸಂಶೋಧನಾ ಮಹಾಪ್ರಬಂಧದ ಪ್ರಧಾನ ಚರ್ಚೆಯಾಗಿದೆ. ಸ್ವಾತಂತ್ರ್ಯಪೂರ್ವ ಮತ್ತು ನಂತರದ ದಶಕಗಳಲ್ಲಿ ನವೋದಯ ಧೋರಣೆಯ ಹನ್ನೊಂದು ಕಾದಂಬರಿಗಳ ಮತಾಂತರದ ವಿಸ್ತೃತ ಮತ್ತು ತರ್ಕಬದ್ಧವಾದ ಚರ್ಚೆಯನ್ನು ಈ ಅಧ್ಯಾಯದಲ್ಲಿ ಮಂಡಿಸಲಾಗಿದೆ. ಶಿವರಾಮ ಕಾರಂತರ ದೇವದೂತರು ಚೋಮನ ದುಡಿ ಕುಡಿಯರ ಕೂಸು ಆಳ ನಿರಾಳ ಮೂಕಜ್ಜಿಯ ಕನಸುಗಳು ಮತ್ತು ಕಣ್ಣಿದ್ದೂ ಕಾಣರು ಕಾದಂಬರಿಗಳನ್ನು ಮತಾಂತರದ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ಇದುವರೆಗೆ ಚರ್ಚಿಸಿದ ಮತಾಂತರದ ದೃಷ್ಟಿಕೋನಕ್ಕಿಂತ ಭಿನ್ನವಾಗಿ ಕಾರಂತರ ಕಾದಂಬರಿಗಳನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಕುವೆಂಪು ಅವರ ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಎಂ.ವಿ.ಸೀ.ಯವರ ಮಾದನ ಮಗಳು, ದೇವುಡು ಅವರ ಮಲ್ಲಿ, ಗೊರೂರರ ಮೆರವಣಿಗೆ ಕಾದಂಬರಿಗಳ ಮತಾಂತರವನ್ನು ಹೊಸ ನೆಲೆಗಳಲ್ಲಿ ಅರ್ಥೈಸಲಾಗಿದೆ.

ಮತಾಂತರಕ್ಕೆ ಇರುವ ಪ್ರೇರೇಪಣೆಗಳು, ಕಾರಣಗಳು, ಮತಾಂತರದ ಸ್ವರೂಪ, ಮತಾಂತರದ ಮೇಲೆ ವಸಾಹತು ಪ್ರಭಾವ, ಮತಾಂತರದ ವಿಭಿನ್ನ ನೆಲೆಗಳ ಚರ್ಚೆ ಮತ್ತು ತಲೆಮಾರಿನ ತಲ್ಲಣಗಳನ್ನು ಈ ಅಧ್ಯಾಯವು ಒಳಗೊಂಡಿದೆ. ಮತಾಂತರಿಗಳು ಕಳಕೊಂಡದ್ದೇನು ಮತ್ತು ಹೊಸಮತಗಳಿಂದ ಪಡಕೊಂಡದ್ದೇನು ಎಂಬ ಮಹತ್ವದ ಜಿಜ್ಞಾಸೆ ಪ್ರಸ್ತುತ ಅಧ್ಯಾಯದಲ್ಲಿದೆ.

ಕನ್ನಡ ಸಾಹಿತ್ಯದಲ್ಲಿ ಮತಾಂತರವನ್ನು ಕುರಿತ ಇದುವರೆಗಿನ ಬಹುತೇಕ ಅಧ್ಯಯನ ಮತ್ತು ಸಂಶೋಧನೆಗಳು (ಕಾದಂಬರಿ ಪ್ರಕಾರಕ್ಕೆ ಅನ್ವಯಿಸಿದಂತೆ) ಕಾರಂತರ ಸಂದರ್ಭದಲ್ಲಿ ಚೋಮನ ದುಡಿ ಮತ್ತು ಕುಡಿಯರ ಕೂಸು ಕಾದಂಬರಿಗಳನ್ನು ಮಾತ್ರ ಕೇಂದ್ರಿಕರಿಸಿವೆ. ಆಳ ನಿರಾಳ, ಮೂಕಜ್ಜಿಯ ಕನಸುಗಳು ಮತ್ತು ಕಣ್ಣಿದ್ದೂ ಕಾಣರು ಕಾದಂಬರಿಗಳಲ್ಲಿ ದೇಶಿ ಮತಗಳ ಮತಾಂತರ

ಚರ್ಚೆ ಇರುವುದನ್ನು ಮೊದಲ ಬಾರಿಗೆ ಈ ಅಧ್ಯಯನದಲ್ಲಿ ದಾಖಲಿಸಲಾಗಿದೆ. ದೇಶಿ ಮತಗಳು ಮತಾಂತರದ ಬಿಕ್ಕಟ್ಟನ್ನು ಎದುರಿಸುವ ಇಂತಹ ಸಂದರ್ಭಗಳನ್ನು ಕಾರಂತರ ಕಾದಂಬರಿಗಳಲ್ಲಿ ಮಾತ್ರ ಗುರುತಿಸಬಹುದು.

ನವೋದಯ ಕಾದಂಬರಿಗಳ ಮತಾಂತರದ ಸ್ವರೂಪವನ್ನು ಬೌದ್ಧಿಕ ನೆಲೆ, ಭೌತಿಕ ನೆಲೆ, ಸಂಕೀರ್ಣ ನೆಲೆ, ಸಮುದಾಯದ ನೆಲೆ ಮತ್ತು ಹುಡುಕಾಟದ ನೆಲೆಗಳೆಂದು ವರ್ಗೀಕರಿಸಿದೆ. ಈ ನೆಲೆಗಳನ್ನು ದೇಶಿ ಮತ್ತು ವಿದೇಶಿ ಮತೀಯ ಹಿನ್ನೆಲೆಗಳೊಂದಿಗೆ ಬೆಸೆದು ಹೊಸ ದೃಷ್ಟಿಕೋನದೊಂದಿಗೆ ವಿವೇಚಿಸಲಾಗಿದೆ.

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಮತಾಂತರವನ್ನು ಪ್ರಧಾನ ಅಂಶವಾಗಿ ಅಭಿವ್ಯಕ್ತಿಸಿದೆ. ಈ ಬಗೆಗಿನ ಇದುವರೆಗಿನ ಚರ್ಚೆಗಳ ಹೊರತಾಗಿ ದೇಶಿ ಪಾದ್ರಿಗಳಿಗಿರುವ ಒತ್ತಡಗಳು, ದೇವಯ್ಯನ ಆಂತರಿಕ ಅಭೀಪ್ಸೆಗಳು, ದೇವಮ್ಮನ ಸನಾತನ ನಂಬಿಕೆಗಳು ಮತ್ತು ಶೂದ್ರರೂ ಮತಾಂತರವನ್ನು ನಿರಾಕರಿಸುವ ಸಂದರ್ಭಗಳನ್ನು ಹೊಸ ಆಯಾಮಗಳಿಂದ ಗಮನಿಸಲಾಗಿದೆ. ಬಚ್ಚನ ಮತಾಂತರದ ಚರ್ಚೆಗಳು ಇದುವರೆಗಿನ ಸಂಶೋಧನೆಗಳಲ್ಲಿ ಗಂಭೀರತೆಯನ್ನು ಪಡೆದಿಲ್ಲ. ಈ ಮತಾಂತರವು ಕ್ರೈಸ್ತ ಪುರೋಹಿತಶಾಹಿಯ ಒತ್ತಡದಿಂದ ಆದದ್ದಲ್ಲ. ದೇವಯ್ಯನ ಒತ್ತಾಯದಿಂದ ಆದದ್ದು. ದೇವಯ್ಯನಂತಹ ಬಲಿಷ್ಠನ ಮತಾಂತರವನ್ನು ತಡೆಯುವುದಕ್ಕಾಗಿ ಬಚ್ಚನಂತಹ ದುರ್ಬಲರ ಮತಾಂತರದ ಅಗತ್ಯವಿತ್ತೇ ಎಂಬ ಜಿಜ್ಞಾಸೆ ಈ ಚರ್ಚೆಯಲ್ಲಿ ಮೂಡಿದೆ.

ಕಾರಂತ ಮತ್ತು ಕುವೆಂಪು ಅವರಿಗೆ ಮಾತ್ರ ಮಿತಿಗೊಂಡಿದ್ದ ಮತಾಂತರದ ಚರ್ಚೆಯನ್ನು ದೇವುಡು, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಎಂ.ವಿ. ಸೀತಾರಾಮಯ್ಯರವರೆಗೂ ವಿಸ್ತರಿಸಲಾಗಿದೆ. ಮತಾಂತರ ನೆಲೆಯಲ್ಲಿ ಅಲಕ್ಷಿತವಾದ ಇವರ ಕಾದಂಬರಿಗಳ್ನು ಚರ್ಚೆಯ ಮುನ್ನೆಲೆಗೆ ತಂದು ಮತಾಂತರದ ಹೊಸ ಹೊಳಹುಗಳನ್ನು ಕಂಡುಕೊಳ್ಳಲಾಗಿದೆ.

ಮತಾಂತರವು ಯಾವುದೇ ಕಾರಣಕ್ಕಾಗಿ ಘಟಿಸಿರಲಿ ತಲ್ಲಣಗಳು ರೂಪುಗೊಳ್ಳುತ್ತವೆ. ಮತಾಂತರಿಯು ಸಮಾಜದ ಘಟಕವಾಗಿರುವುದರಿಂದ ಮತಾಂತರಿಯ ವೈಯಕ್ತಿಕ ತಲ್ಲಣಗಳು ಸಮಾಜದ ತಲ್ಲಣಗಳಾಗಿ ಮಾರ್ಪಡುತ್ತವೆ. ಚೋಮನ ದುಡಿಯ ಗುರುವನ ಮತಾಂತರವು ಚೋಮನ ಸಮುದಾಯದ ಪಾರಂಪರಿಕ ನಂಬಿಕೆಯನ್ನು ಅಸ್ಥಿರಗೊಳಿಸುತ್ತದೆ. ಗುರುವನ ತಲೆಮಾರು

ಮತಾಂತರವನ್ನು ತಕ್ಷಣವೇ ಸ್ವೀಕರಿಸುತ್ತದೆ. ಕುಡಿಯರ ಕೂಸುವಿನ ಗಿಡ್ಡಿ ಮತಾಂತರವನ್ನು ಮರು ಪ್ರಶ್ನಿಸದೇ ಒಪ್ಪಿಕೊಳ್ಳುತ್ತಾಳೆ. ಅದೇ ಕುಲದ ಹಿರಿಯರಾದ ಚೋಮ ಮತ್ತು ಬಿರುಮ ಮತಾಂತರವನ್ನು ನಿರಾಕರಿಸುತ್ತಾರೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಚಿನ್ನಪ್ಪಗೌಡ ಹೊಸ ತಲೆಮಾರಿನ ಸಂಕೇತವಾಗಿ ಮತಾಂತರವಾಗಿದ್ದಾನೆ. ಮುಕುಂದಯ್ಯ ಗಡ್ಡದಯ್ಯರು ತಲೆಮಾರಿನ ಅಂತರವನ್ನು ಇಟ್ಟುಕೊಂಡು ಮತಾಂತರವನ್ನು ಖಂಡಿಸುತ್ತಾರೆ. ಇಂತಹ ತಲ್ಲಣಗಳು ನವೋದಯ ನಂತರದ ತಲೆಮಾರುಗಳಲ್ಲಿ ದುರ್ಬಲವಾಗಿ ಮತಾಂತರಗಳು ವೈಯಕ್ತಿಕ ನೆಲೆಯಲ್ಲಿ ಒಪ್ಪಿತವಾಗುತ್ತವೆ.

**ಮತಾಂತರ ಮತ್ತು ಸಾಂಸ್ಕೃತಿಕ ಸಂಘರ್ಷದ ನೆಲೆಗಳು** ಎಂಬ ಅಧ್ಯಾಯವು ಹಿಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಿದ ಹನ್ನೊಂದು ಕಾದಂಬರಿಗಳ ಮತಾಂತರ ಪ್ರೇರಿತ ಸಂಘರ್ಷಗಳ ಸ್ವರೂಪವನ್ನು ವಿಶ್ಲೇಷಿಸುತ್ತದೆ. ಸಂಘರ್ಷವೆಂದರೇನು, ಸಾಂಸ್ಕೃತಿಕ ಸಂಘರ್ಷದ ಸ್ವರೂಪವೇನು, ಸಂಘರ್ಷದ ಪರಿಣಾಮಗಳು ಧಾರ್ಮಿಕ ಮತ್ತು ಮತೀಯ ನೆಲೆಗಳಲ್ಲಿ ಸ್ಫೋಟಗೊಳ್ಳುವ ಬಗೆ ಇಂತಹ ಮುಖ್ಯ ಅಂಶಗಳನ್ನು ಈ ಅಧ್ಯಾಯವು ಒಳಗೊಂಡಿದೆ.

ಮತಾಂತರ ವಿರೋಧಿ ನಿಲುವುಗಳು, ಪ್ರತಿಭಟನೆ, ಮರು ಮತಾಂತರ, ಕೂಡುಕಟ್ಟಲೆ, ಶುದ್ಧೀಕರಣದಂತಹ ಮತಾಂತರದ ಪರ್ಯಾಯ ರೂಪಗಳನ್ನು ನಿರೂಪಿಸುವ ತುರ್ತು ಎದುರಾದದ್ದು ಏಕೆ, ಸಂಘರ್ಷಗಳ ಪರಿಣಾಮಗಳು ಮತಾಂತರಿಗಳನ್ನು ಮೂಲಮತದಲ್ಲೇ ಉಳಿಸಲು ಸಹಕಾರಿಯಾದುವೇ ಮತಾಂತರಿಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಸುಧಾರಣೆ ಸಾಧ್ಯವಾಯಿತೇ ಎಂಬ ಸವಾಲುಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಈ ಅಧ್ಯಾಯದಲ್ಲಿದೆ.

ಸಂಸ್ಕೃತಿಯೆಂಬುದು ಒಂದು ಜೀವನ ಕ್ರಮ. ಆಯಾ ಜಾತಿ ಜನಾಂಗ ಸಮುದಾಯಗಳು ಒಪ್ಪಿಕೊಂಡ ರೀತಿನೀತಿ ಊಟೋಪಚಾರ ವೈವಾಹಿಕ ಸಂಬಂಧಗಳು ಸಾಂಸ್ಕೃತಿಕ ವಲಯದೊಳಗೆ ಸೇರುತ್ತವೆ.ಮತಾಂತರವು ಹುಟ್ಟುಹಾಕಿದ ಪಲ್ಲಟಗಳು ಸಾಂಸ್ಕೃತಿಕ ಸಂಘರ್ಷಕ್ಕೆ ಕಾರಣವಾಗುತ್ತವೆ. ಮತಾಂತರವು ಮೂಲ ಮತ ಮತ್ತು ಹೊಸ ಮತಗಳ ನಡುವೆ ಸೃಷ್ಟಿಸುವ ಬಿಕ್ಕಟ್ಟುಗಳಲ್ಲಿ ಸಾಂಸ್ಕೃತಿಕ ಸಂಘರ್ಷದ ಬೇರುಗಳಿವೆ.

ಧಾರ್ಮಿಕ ಸಂಘರ್ಷವು ಮತಾಂತರಿಯು ಅನುಸರಿಸಬೇಕಾದ ಹೊಸಧರ್ಮದ ದೈವಾರಾಧನೆಯ ನೆಲೆಯಲ್ಲಿ ಕಾಣಿಸಿಕೊಳ್ಳುತ್ತದೆ. ಮೂಲ ದೈವವನ್ನು ನಿರಾಕರಿಸಲಾಗದ ತೊಳಲಾಟದಲ್ಲಿ ಮತಾಂತರಿಯ ಮನಸ್ಸು ಒದ್ದಾಡುತ್ತದೆ. ಮತಾಂತರವಾಗುವ ಮೊದಲು ವ್ಯಕ್ತಿಯ ವಿಚಾರಗಳು ಸಂಘರ್ಷಕ್ಕೆ ಗುರಿಯಾಗುತ್ತವೆ. ಚೋಮ ಪಂಜುರ್ಲಿಯ ಎದುರು ನಿರುತ್ತರನಾದದ್ದು ಇಂತಹ ಸಂದರ್ಭದಲ್ಲಿಯೇ. ಮತೀಯ ಸಂಘರ್ಷವು ಭೌತಿಕ ರೂಪದ್ದಾಗಿರುತ್ತದೆ. ಮತಾಂತರದ ಹಾವಳಿಯನ್ನು ಸಹಿಸದ ಮತೀಯ ಗುಂಪುಗಳು ಮತೀಯ ಪ್ರಜ್ಞೆಯೊಂದಿಗೆ ಹಿಂಸೆಗೆ ಮುಂದಾಗಿ ಮೂಲಮತದಲ್ಲೇ ಉಳಿಯಬೇಕೆಂಬ ಒತ್ತಡವನ್ನು ಹೇರುತ್ತವೆ.

ಮತಾಂತರದ ಸಂಘರ್ಷವು ಪ್ರತಿರೋಧದ ರೂಪದಲ್ಲಿ ಪ್ರಕಟವಾಗಿದೆ. ನವೋದಯದ ಕಾದಂಬರಿಗಳು ಮತಾಂತರವನ್ನು ಸಂಪೂರ್ಣವಾಗಿ ಸಮರ್ಥಿಸಿಲ್ಲ. ಕಾದಂಬರಿಗಳಲ್ಲಿ ಮತಾಂತರವು ಪ್ರಧಾನ ಅಂಶವಾಗಿ ಕಾಣಿಸಿಕೊಂಡರೂ ಮತಾಂತರ ಕ್ರಿಯೆಗಳು ಸಂಭವಿಸದೇ, ಸಂಭವಿಸಿದರೂ ದುರ್ಬಲ ನಿರ್ವಹಣೆಯ ಮೂಲಕ ಮತಾಂತರದ ನಿರಾಕರಣ ಭಾವವನ್ನು ಅಭಿವ್ಯಕ್ತಿಸಿವೆ.

ಮರುಮತಾಂತರವು ಪ್ರತಿರೋಧದ ಇನ್ನೊಂದು ರೂಪವಾಗಿದೆ. ಮತಾಂತರಿಗಳನ್ನು ಮೂಲ ಮತದಲ್ಲೇ ಉಳಿಸಿಕೊಳ್ಳುವ ಪ್ರತಿತಂತ್ರವಾಗಿ ಕುಡಿಯರ ಕೂಸುವಿನಲ್ಲಿ ಗಿಡ್ಡಿ ಮತ್ತು ಕುಕ್ಕರನ್ನು ಕೂಡುಕಟ್ಟಲೆಯ ಮೂಲಕ ಮರು ಮತಾಂತರಗೊಳಿಸಲಾಗಿದೆ. ಕುವೆಂಪು ಕೂಡ ದೇವಯ್ಯನ ಮೂಲಕ ಮರು ಮತಾಂತರದ ಸೂಚನೆ ನೀಡಿದ್ದಾರೆ. ಹಿಂದೂ ಧರ್ಮ ಮತ್ತು ರಾಷ್ಟ್ರಪ್ರಜ್ಞೆಯ ಪೋಷಕಾಂಶವಾಗಿ ನವೋದಯ ಕಾದಂಬರಿಗಳು ಮತಾಂತರದ ವಿಫಲತೆಯನ್ನು ಕಂಡುಕೊಂಡಿವೆ.

**ಮತಾಂತರದ ಬಹುಮುಖಿ ನೆಲೆಗಳು** ನವೋದಯ ನಂತರದ ಮತಾಂತರಗಳನ್ನು ನಿರೂಪಿಸುವ ಅಧ್ಯಾಯವಾಗಿದೆ. ಈ ಕಾಲದ ಮತಾಂತರವು ನವೋದಯಕ್ಕಿಂತ ಸಂಪೂರ್ಣ ಭಿನ್ನ ನೆಲೆಗಳಲ್ಲಿ ಬಿಂಬಿತವಾಗಿದೆ. ಈ ಭಿನ್ನತೆಗಳಿಗೆ ಕಾರಣಗಳೇನು ಮತ್ತು ಮತಾಂತರವು ನಿಷೇಧಾತ್ಮಕ ಕ್ರಿಯೆಗಿಂತ ಹೊಸದೊಂದು ಅನುಕೂಲವೆಂಬಂತೆ ಕಾಣಿಸಿಕೊಳ್ಳಲು ಇರಬಹುದಾದ ತುರ್ತುಗಳೇನು ಎಂಬ ಚರ್ಚೆಗೆ ಈ ಅಧ್ಯಾಯ ಮುಕ್ತವಾಗಿದೆ. ಸ್ವಯಂಪ್ರೇರಣಾ ನೆಲೆ, ವಿರೋಧಿ ನೆಲೆ, ಜೀವವಿರೋಧಿ ನೆಲೆ ಮತ್ತು ಭ್ರಮಾತ್ಮಕ ನೆಲೆ, ಜಾತಿ ವರ್ಗ ಸಮುದಾಯದ ನೆಲೆ, ಹುಡುಕಾಟದ ನೆಲೆ ಈ ಬಹುಸ್ತರಗಳಲ್ಲಿ ಹದಿನೈದು ಕಾದಂಬರಿಗಳನ್ನು ಈ ಅಧ್ಯಾಯದಲ್ಲಿ ಮತಾಂತರ ಚರ್ಚೆಗೆ ಒಳಪಡಿಸಲಾಗಿದೆ. ನವೋದಯ ನಂತರದ ಕಾದಂಬರಿಗಳ ಮತಾಂತರ ವಿಚಾರಗಳನ್ನು ಗಾಂಧಿ ಅಂಬೇಡ್ಕರ್ ಮತ್ತು ಲೋಹಿಯಾ ಚಿಂತನೆಗಳು ಪ್ರಭಾವಿಸಿರುವ ಸಾಧ್ಯತೆಗಳನ್ನು ಈ ಅಧ್ಯಾಯದಲ್ಲಿ ಸೂಚಿಸಲಾಗಿದೆ.

ನವೋದಯದ ನಂತರ ಮತಾಂತರವು ಬಹುಮುಖಿ ನೆಲೆಗಳಲ್ಲಿ ಪ್ರಕಟವಾಗಿದೆ. ವೈಯಕ್ತಿಕ ಚಿಂತನೆಗಳಿಗೆ ಮುಕ್ತ ಅವಕಾಶ ಒದಗಿ ಮತಾಂತರವು ಖಾಸಗಿ ವಿಚಾರವೆಂಬಂತೆ ಚರ್ಚಿಸಲ್ಪಟ್ಟಿತು. ಸ್ವಯಂ ಪ್ರೇರಣೆಯ ನೆಲೆಯಲ್ಲಿ ಮನವೊಲಿಕೆಯ ಮತಾಂತರಗಳು ಸಾಧ್ಯವಾದವು. ಇಂತಹ ಮತಾಂತರವನ್ನು ಅನಕೃ ಅವರ ಪಶ್ಚಾತ್ತಾಪ, ದೇವಪ್ರಿಯ ಮತ್ತು ಶಾಂತಿನಾಥ ದೇಸಾಯಿಯವರ ಓಂ ಣಮೋ ಕಾದಂಬರಿಗಳಲ್ಲಿ ಅವಲೋಕಿಸಿದೆ.

ಜಾತಿ ಸಂಘರ್ಷದ ನೆಲೆಯಲ್ಲಿ ಬಸವರಾಜ ಕಟ್ಟೀಮನಿಯವರ ನೀ ನನ್ನ ಮುಟ್ಟಬೇಡ ಮತ್ತು ವರ್ಗ ಸಂಘರ್ಷದ ನೆಲೆಯಲ್ಲಿ ಶೇಷನಾರಾಯಣರ ಬೀಸು ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ. ವಿರೋಧಿ ನೆಲೆಯಲ್ಲಿ ಎಸ್.ಎಲ್. ಭೈರಪ್ಪನವರ ಧರ್ಮಶ್ರೀ ವಿಶುಕುಮಾರ್ ಅವರ ಮದರ್, ಜೀವವಿರೋಧಿ ನೆಲೆಯಲ್ಲಿ ಜನಾರ್ಧನ ಗುರ್ಕಾರ್ ಅವರ ದಂಬನ ನಾಯಿ ಮತ್ತು ವಿಶುಕುಮಾರ್ ಅವರ ಕರಾವಳಿ, ಭ್ರಮಾತ್ಮಕ ನೆಲೆಯಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಚಿದಂಬರ ರಹಸ್ಯ, ಮಾಯಾಲೋಕ ಮತ್ತು ಕುಂ. ವೀರಭದ್ರಪ್ಪನವರ ಕೊಟ್ರ ಹೈಸ್ಕೂಲಿಗೆ ಸೇರಿದ್ದು ಕಾದಂಬರಿಗಳನ್ನು ಚರ್ಚಿಸಿದೆ. ನವೋದಯ ಕಾದಂಬರಿಕಾರರು ಮತಾಂತರ ಪ್ರೇರಿತ ಹಿಂಸೆಯನ್ನು ಒಪ್ಪಿಕೊಳ್ಳಲಿಲ್ಲ. ಪ್ರಗತಿಶೀಲ ನವ್ಯ ದಲಿತ ಬಂಡಾಯದವರು ಮತಾಂತರ ಹಿಂಸೆಯನ್ನು ಭೌತಿಕ ರೂಪದಲ್ಲಿ ಪ್ರಕಟಿಸಿದರು.

ಈ ಅಧ್ಯಾಯದಲ್ಲಿ ಮತಾಂತರವನ್ನು ಸಮುದಾಯದ ಒಳಗಿನಿಂದ ವಿಶ್ಲೇಷಿಸುವ ಮೂರು ಕಾದಂಬರಿಗಳ ಚರ್ಚೆಯೂ ಸೇರಿದೆ. ಮುಖ್ಯವಾಗಿ ಕ್ರೈಸ್ತ ಮತ್ತು ಹಿಂದೂ ಸಮುದಾಯ ಸಂವೇದನೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಮತಾಂತರಗೊಂಡ ಸಮುದಾಯದ ಕಾದಂಬರಿಕಾರರೇ, ಮತಾಂತರ ಚಟುವಟಿಕೆಗಳ ಸ್ವರೂಪವನ್ನು ವಿವರಿಸುವಾಗ ಏಕಪಕ್ಷೀಯ ನಿಲುವುಗಳನ್ನು ನಿವಾರಿಸಿಕೊಳ್ಳುವ ಸವಾಲುಗಳನ್ನು ಎದುರಿಸಬೇಕಾಗಿದೆ. ಮತಾಂತರವು ಭಾವನಾತ್ಮಕ ಮತ್ತು ಅತ್ಯಂತ ಸೂಕ್ಷ್ಮ ವಿಚಾರವಾಗುತ್ತಿರುವ ವರ್ತಮಾನದಲ್ಲಿ ಆ ಬಗೆಗಿನ ತಮ್ಮ ವಾದಗಳನ್ನು ಸಮತೋಲನದಲ್ಲಿ ಅಭಿವ್ಯಕ್ತಿಸುವ ಸವಾಲು ಆಧುನಿಕ ಕಾದಂಬರಿಕಾರರ ಮುಂದಿದೆ. ನಾ. ಡಿಸೋಜರ ಇಗರ್ಜಿ ಸುತ್ತಲಿನ ಹತ್ತು ಮನೆಗಳು ಮತ್ತು ಬಾಮಣ್, ಗೋಪಾಲಕೃಷ್ಣ ಪೈ ಅವರ ಸ್ವಪ್ನಸಾರಸ್ವತ ಕಾದಂಬರಿಗಳ ಮತಾಂತರದ ಸ್ಥೂಲಚರ್ಚೆಗೆ ಈ ಅಧ್ಯಾಯ ದಿಕ್ಸೂಚಿಯಾಗಿದೆ.

ಮತಾಂತರಿಗಳು ಮೂಲಮತಗಳ ಆಚರಣೆಯನ್ನು ಮುಂದುವರೆಸುವಲ್ಲಿ ಎರಡು ಮತಗಳ ನಡುವಿನ ತೊಳಲಾಟ ಮತ್ತು ಮಾನಸಿಕ ಸಂಘರ್ಷಗಳನ್ನು ಕಲ್ಲುಕುಟಿಗ ಹಾಗೂ ಚೌಡಿ ಬನದ ಪೂಜೆಯ ಸಂದರ್ಭಗಳಲ್ಲಿ ಇಗರ್ಜಿ ಸುತ್ತಲಿನ ಹತ್ತು ಮನೆಗಳು ಕಾದಂಬರಿಯಲ್ಲಿ ಗುರುತಿಸಬಹುದು. ಕಲ್ಲುಕುಟಿಗ ಮತ್ತು ಚೌಡಿಯನ್ನು ಪೂಜಿಸಬಾರದೆಂಬ ಕ್ರೈಸ್ತ ಪುರೋಹಿತ-ಶಾಹಿಯ ದಬ್ಬಾಳಿಕೆ ಮತಾಂತರಿಗಳ ಗೊಂದಲಕ್ಕೆ ಕಾರಣವಾಗುತ್ತದೆ. ಮತೀಯ ವೈರುಧ್ಯಗಳನ್ನು ಅರಿಯದ ಅನೇಕ ಕುಟುಂಬಗಳಲ್ಲಿ ಕಲ್ಲುಕುಟಿಗ ಮತ್ತು ಚೌಡಿ ಪೂಜೆ ಸಾಮರಸ್ಯದ ಸಂಕೇತವಾಗುತ್ತದೆ.

ಮತಾಂತರಿಗಳ ಮೂಲ ಮತದ ಶೋಧವನ್ನು ಗೋಪಾಲಕೃಷ್ಣ ಪೈಯವರ ಸ್ವಪ್ನಸಾರಸ್ವತ ಕಾದಂಬರಿಯಲ್ಲಿ ಗುರುತಿಸಬಹುದು. ಗೋವಾದ ಗೌಡಸಾರಸ್ವತರು ಪೋರ್ಚುಗೀಸರ ದಬ್ಬಾಳಿಕೆಗೆ ಒಳಗಾಗಿ ಹಿಂದೂ ಮತವನ್ನು ತ್ಯಜಿಸಿ ಕ್ರೈಸ್ತ ಮತಾಂತರಿಗಳಾಗುವ ಸಂದರ್ಭದ ತಲ್ಲಣಗಳನ್ನು ಈ ಕಾದಂಬರಿಯು ನಿರೂಪಿಸಿದೆ. ಗೌಡಸಾರಸ್ವತ ಸಮುದಾಯವು ಮತಾಂತರದಿಂದ ದೂರ ಉಳಿಯಲು ಮಾಡುವ ಪ್ರಯತ್ನಗಳಲ್ಲಿ ಹಿಂದೂ ಮತ ಮತ್ತು ಕ್ರೈಸ್ತ ಮತೀಯ ಸಂಘರ್ಷಗಳ ಸುಳಿವುಗಳಿವೆ. ಚೋಮನ ದುಡಿಯ ಪಂಜುರ್ಲಿಯಂತೆ, ದಂಬನ ನಾಯಿಯ ಕಲ್ಕುಡನಂತೆ, ಸ್ವಪ್ನಸಾರಸ್ವತದಲ್ಲಿ ನಾಗ್ಡೊಬೇತಾಳ ಎಂಬ ಅಲೌಕಿಕ ಪಾತ್ರ ಗೌಡಸಾರಸ್ವತರ ಮತಾಂತರಗಳನ್ನು ತಡೆಯುತ್ತದೆ. ಮತಾಂತರ ಸಂಬಂಧಿ ದೊಂಬಿಗಳು ಹಿಂಸಾರೂಪಕ್ಕೆ ತಿರುಗುವ ಮೂಲಕ ಮತಾಂತರದ ಅಪಾಯಗಳನ್ನು ಸ್ವಪ್ನಸಾರಸ್ವತ ದಾಖಲಿಸಿದೆ. ಮತಾಂತರಕ್ಕೆ ಆಧುನಿಕತೆ ಪ್ರೇರಣೆಯಾಗಬಲ್ಲದೆಂಬ ಅಂಶವನ್ನು ಗೋವಾದಲ್ಲಿ ಪೋರ್ಚುಗೀಸರು ಸ್ಥಾಪಿಸಿದ ಮುದ್ರಣಯಂತ್ರದ ಸಂದರ್ಭದಿಂದ ಸಮರ್ಥಿಸಬಹುದು. ಮುದ್ರಣಯಂತ್ರದಿಂದ ಬ್ರಾಹ್ಮಣ ಸಮುದಾಯದ ಬರವಣಿಗೆಯ ಕಾಯಕ ನಿಂತುಹೋಗಿ ಅವರು ಹೊಟ್ಟೆಪಾಡಿಗಾಗಿ ಪರದಾಡುವಾಗ ಆಮಿಷವೊಡ್ಡಿ ಮತಾಂತರಗೊಳಿಸುವ ಹುನ್ನಾರ ಪುನರ್ ಜಿಜ್ಞಾಸೆಗೆ ತೆರೆದುಕೊಳ್ಳುತ್ತದೆ.

ಇದುವರೆಗಿನ ಮತಾಂತರದ ಚರ್ಚೆಯಲ್ಲಿ ಕಂಡುಕೊಂಡ ಫಲಿತಗಳನ್ನು ಕೊನೆಯ ಅಧ್ಯಾಯ **ಸಮಾರೋಪದಲ್ಲಿ** ದಾಖಲಿಸಿದೆ. ಈಗಾಗಲೇ ಬೇರೆಬೇರೆ ಸಂದರ್ಭಗಳಲ್ಲಿ ಪ್ರಕಟವಾಗಿರ ಬಹುದಾದ ಫಲಿತಗಳನ್ನು ಹೊರತುಪಡಿಸಿ, ಈ ಅಧ್ಯಯನದಲ್ಲಿ ದೊರೆತ ಹೊಸ ಅಂಶಗಳನ್ನು

ಮಾತ್ರ ಇಲ್ಲಿ ಗ್ರಹಿಸಲಾಗಿದೆ. ಸ್ತ್ರೀವಾದಿ ನೆಲೆಯಲ್ಲಿ ಮತಾಂತರದ ವಿಚಾರಗಳು ಗಂಭೀರವಾಗಿ ಪ್ರಕಟವಾಗಿಲ್ಲ ಎಂಬ ಅಂಶವನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಮತಾಂತರದ ಅಭಿವ್ಯಕ್ತಿಯ ಕ್ರಮ ಕಾಲದಿಂದ ಕಾಲಕ್ಕೆ ಬದಲಾಗಿದೆ. ಮತಾಂತರವನ್ನು ನವೋದಯದ ಕಾಲದಲ್ಲಿ ಸಾಮಾಜಿಕ ಅನಿಷ್ಟವೆಂಬಂತೆ ಗ್ರಹಿಸಲಾಗಿತ್ತು. ನವೋದಯದ ನಂತರದಲ್ಲಿ ವೈಯಕ್ತಿಕ ಆಯ್ಕೆಯ ಜೊತೆಗೆ ದಬ್ಬಾಳಿಕೆ, ಶೋಷಣೆಗಳ ವಿರುದ್ಧದ ಬಂಡಾಯವೆಂಬಂತೆ ಕಾಣಿಸಿಕೊಂಡು ಆಧುನಿಕೋತ್ತರ ಕಾದಂಬರಿಗಳಲ್ಲಿ ಸಮುದಾಯಗಳ ಸಂವೇದನೆಯಾಗಿ ಪ್ರಕಟವಾಗಿದೆ.

ಮತಾಂತರ ಚರ್ಚೆಗಳು ನಿರಂತರವಾಗಿ ಮುಂದುವರೆದಿವೆ. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಮತಾಂತರದ ಛಾಯೆ ಇದೆ. ಮತಾಂತರ ಗ್ರಹಿಕೆಯ ರೂಪಗಳು ಕೆಲವೊಮ್ಮೆ ಸಾಂದ್ರವಾಗಿ ಕೆಲವೊಮ್ಮೆ ದುರ್ಬಲವಾಗಿ ಪ್ರಕಟವಾಗಿವೆ. ಮತಾಂತರವು ಸರಿಯೋ ತಪ್ಪೋ ಎಂಬ ನಿರ್ಧಾರ ನವೋದಯ ಕಾದಂಬರಿಗಳಲ್ಲಿ ಸ್ಪಷ್ಟವಾಗಿಲ್ಲ. ಹಿಂದೂವಾದ ಮತ್ತು ರಾಷ್ಟ್ರೀಯತೆಯ ಪ್ರಭಾವಕ್ಕೊಳಗಾದ ಆ ಕಾಲದ ಕಾದಂಬರಿಕಾರರು ಮತಾಂತರವನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳಲಿಲ್ಲ. ಸುಧಾರಣಾವಾದದ ಹಿನ್ನೆಲೆಯಲ್ಲಿ ಧಾರ್ಮಿಕ ಮತ್ತು ಮತೀಯ ಕಟ್ಟುಪಾಡುಗಳನ್ನು ಶಿಥಿಲಗೊಳಿಸಿ ಮತಾಂತರವನ್ನು ನಿಯಂತ್ರಿಸಬಹುದೆನ್ನುವ ಚಿಂತನೆ ಅವರದ್ದಾಗಿತ್ತು. ಈ ಬಗೆಯ ವಿಶಿಷ್ಟ ಮತ್ತು ವಿಭಿನ್ನ ಚಿಂತನೆಗಳನ್ನು ವಿಮರ್ಶಿಸಿ ಮತಾಂತರದ ನಿಜ ಸ್ವರೂಪವನ್ನು ಅರಿಯುವ ಸಲುವಾಗಿ **ನವೋದಯ ಕಾದಂಬರಿಗಳಲ್ಲಿ ಮತಾಂತರ ಮತ್ತು ಸಾಂಸ್ಕೃತಿಕ ಸಂಘರ್ಷ** ಎಂಬ ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲಾಗಿದೆ.